ದಿನಾಂಕಃ 29.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ವಾದಿ ಪರ ಶ್ರೀ. ಬಿ. ಕೆ. ಕೆ ವಕೀಲರಿಂದಃ**

ನಾನು ಪಿ ಯು ಸಿ ವರೆಗೆ ಓದಿರುತ್ತೇನೆ. ದಾವಾ ಆಸ್ತಿ ರಿ ಸ ನಂಬರ 1081 ಕ್ಷೇತ್ರ 01 ಎಕರೆ 21 ಗುಂಟೆ ಜಮೀನು ನಿರೂಪಾದ ಹೊನಕುಪ್ಪಿ ಇವರಿಗೆ ಹೇಗೆ ಬಂದಿರುತ್ತದೆಂದು ದಾಖಲೆಗಳನ್ನು ನೋಡಿರುತ್ತೀರಾ? ಎಂದರೆ ಸಾಕ್ಷಿಯು ಪಹಣಪತ್ರಿಕೆ ಋಣಭಾರ ರಾಹಿತ್ಯ ಪ್ರಮಾಣಪತ್ರ ನೋಡಲಾಗಿ ಸದರಿಯವರು ಸ್ವಂತ ಖರೀದಿ ಹಿಡಿದಿರುವ ಬಗ್ಗೆ ಗೊತ್ತಾಗಿರುತ್ತದೆ. ಸದರಿ ಆಸ್ತಿಯು ನಿರೂಪಾದ ಹೊನಕುಪ್ಪಿ ಇವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆಂದರೆ ಸರಿಯಲ್ಲ. ಸದರಿ ಆಸ್ತಿಯು ಅವರ ಪಿತ್ರಾರ್ಜಿತ ಆಸ್ತಿಯಾಗಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ನಿರೂಪಾದ ಹೊನಕುಪ್ಪಿ ಇವರು ಮದ್ಯ ವ್ಯಸನಿಯಾಗಿದ್ದು, ಅದರ ದುರುಪಯೋಗ ಪಡೆದುಕೊಂಡು ಆತ ಕುಡಿದ ಮತ್ತಿನಲಿಲರುವಾಗ ಸದರಿ ಆಸ್ತಿಗೆ ಸಂಬಂಧಿಸಿದಂತೆ ಖೊಟ್ಟಿ ಖರೀದಿ ಪತ್ರವನ್ನು

ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆತನಿಗೆ ಕುಡಿತದ ಚಟ ಇದ್ದುದರಿಂದ ಆತನಿಗೆ ಸಾರಾಯಿ ಕುಡಿಸಿ ನೊಂದಣಿ ಕಚೇರಿಗೆ ಕರೆದುಕೊಂಡು ಹೋಗಿ ಖೊಟ್ಟಿ ಖರೀದಿ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಮಾರಾಟ ಮಾಡಲು ಆತನಿಗೆ ಯಾವುದೇ ಕುಟುಂಬದ ಅಡಚಣೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯನ್ನು ಮಾರಾಟ ಮಾಡುತ್ತಿರುವ ಬಗ್ಗೆ ಅವರು ದಿನಪತ್ರಿಕೆಯಲ್ಲಿ ಜಾಹಿರಾತು ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ದಿನಪತ್ರಿಕೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ನಿಜ. ಅವಶ್ಯ ಎನಿಸಿದರೆ ಹಾಜರುಪಡಿಸುತ್ತೇನೆ. ನಿರೂಪಾದ ಹೊನಕುಪ್ಪಿ ಮತ್ತು ಆತನ ತಾಯಿ, ಹೆಂಡತಿ ಮಕ್ಕಳು ಎಲ್ಲರೂ ಸೇರಿಯೇ ತಮ್ಮ ಕುಟುಂಬದ ಅಡಚಣೆಗಾಗಿ ಸದರೀ ಆಸ್ತಿಯನ್ನು ನಮಗೆ ಖರೀದಿ ಕೊಟ್ಟಿರುತ್ತಾರೆ.

ಸದರಿ ಆಸ್ತಿಯನ್ನು ಖರೀದಿ ತೆಗೆದುಕೊಳ್ಳುವ ಕಾಲಕ್ಕೆ ವಾದಿ ಕುಟುಂಬಕ್ಕೆ ಎಷ್ಟು ಜಮೀನು ಇರುತ್ತದೆ ಎಂದು ವಿಚಾರಿಸಿರುತ್ತೀರಾ? ಎಂದರೆ ಸಾಕ್ಷಿಯು ನಮಗೆ ಇನ್ನೂ ಜಮೀನು ಇದ್ದು, ಕುಟುಂಬದ ಅಡಚಣೆಗಾಗಿ ಇಷ್ಟು ಜಮೀನನ್ನು ಮಾತ್ರ ಮಾರಾಟ ಮಾಡುತ್ತಿದ್ದೇವೆ ಎಂದು ಹೇಳಿರುತ್ತಾರೆಂದು ನುಡಿಯುತ್ತಾರೆ. ಖರೀದಿ ಕೊಟ್ಟ ಜಮೀನನ್ನು ಹೊರತುಪಡಿಸಿ ಇನ್ನು ಎಷ್ಟು ಜಮೀನು ಉಳಿದಿರುತ್ತದೆಂದು ನಾನು ವಿಚಾರಿಸಿರುವುದಿಲ್ಲ.

ಸಿವಿಲ್ ನ್ಯಾಯಾಲಯ, ಗೋಕಾಕದಲ್ಲಿ ಅಸಲು ದಾವಾ ನಂಬರ 431/2013 ನೇದ್ದನ್ನು ದಾಖಲಿಸಿರುತ್ತಾರೆಂದರೆ ನಿಜ. ಸದರಿ ದಾವೆಯನ್ನು 01 ಎಕರೆಗೆ ಸಂಬಂಧಿಸಿದಂತೆ ದಾಖಲಿಸಿದ್ದು, ಸದರಿ 01 ಎಕರೆ ಜಮೀನನ್ನು ಸಹ ಖರೀದಿ ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಎರಡೂ

ಜಮೀನುಗಳನ್ನು ಹೊರತುಪಡಿಸಿ ವಾದಿಯ ಕುಟುಂಬಕ್ಕೆ ಇನ್ನು ಎಷ್ಟು ಜಮೀನುಗಳು ಉಳಿದಿರುತ್ತವೆ ಎಂದು ನಾನು ವಿಚಾರಿಸಿರುವುದಿಲ್ಲ. ದಾವಾ ಆಸ್ತಿ ಸರ್ವೆ ನಂಬರ 1081/1 ರಲ್ಲಿಯ ವಾದಿಯ ಕುಟುಂಬದವರಿಗೆ ಸಂಬಂಧಿಸಿದವರ 02 ಗುಂಟೆ ಜಮೀನನ್ನು ಹೊರತುಪಡಿಸಿ ಎಲ್ಲಾ ಜಮೀನನ್ನು ಖರೀದಿಸಿರುತ್ತೇನೆಂದರೆ ನಿಜ. ಸಾಕ್ಷಿ ಮುಂದುವರೆದು ಸದರಿ ಜಮೀನನ್ನು ಹೊರತುಪಡಿಸಿ ಬೇರೆ ಜಮೀನು ಸಹ ಇರುತ್ತದೆಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಆದರೆ ಹಾಜರುಪಡಿಸುತ್ತೇನೆ. ವಾದಿಯ ಕುಟುಂಬಕ್ಕೆ ಸದರಿ ಜಮೀನನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ಇರದೇ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿಯ ವಾದಿಯ ಪಾಲನ್ನು ಎತ್ತಿ ಹಾಕಬೇಕೆನ್ನುವ ಉದ್ದೇಶದಿಂದ ವಾದಿಯ ತಂದೆಯ ಕುಡಿತದ ಚಟದ ಗೈರು ಪಾಯದೇ ತೆಗೆದುಕೊಂಡು ದಾವಾ ಆಸ್ತಿಗೆ ಸಂಬಂಧಿಸಿದಂತೆ ಸುಳ್ಳು ಖರೀದಿ ಪತ್ರವನ್ನು ಬರೆಸಿರಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಇವತ್ತಿಗೂ ಸಹ ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರು ದಾವಾ ಆಸ್ತಿಯ ಕಬ್ಜಾ ವಹಿವಾಟಿಯಲ್ಲಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿಯ ವಾದಿಯ ಪಾಲನ್ನು ಹೊಡೆಯಬೇಕೆನ್ನುವ ಉದ್ದೇಶದಿಂದ ಸುಳ್ಳು ಸಂಗತಿಗಳುಳ್ಳ ಪ್ರತಿವಾದ ಪತ್ರವನ್ನು ಹಾಗೂ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

**<u>ಸಾಕ್ಷಿಯ ಸಹಿ</u>**